Co-operation that has to get the accounts audited.

Sri S. M. KRISHNA.—Does the Government take a year and a half in every mis-appropriation case with respect to co-operative societies?

Sri KONDAJJI BASAPPA.—I could not hear. Please repeat.

ಶ್ರೀ ಎಸ್. ಎಂ. ಕೃಷ್ಣ.—ಪ್ರತಿಯೊಂದು ಮಿಸ್ ಅಪ್ರೊಪ್ರಿಯೇಷನ್ ಕೇಸ್‌ನಲ್ಲೂ ಸರ್ಕಾರದವರು ಒಂದೂವರೆ ವರ್ಷ ತೆಗೆದುಕೊಳ್ಳುತ್ತಾರೆಯೇ ಇರ್‌ವೆಸ್ಟಿಗೇಷನ್ ಮಾಡುವುದಕ್ಕೆ?

Sri KONDAJJI BASAPPA.—No, Sir.

Sri C. J. MUCKANNAPPA.—In what connection did the Police seize the books of account? You were pleased to tell that the books were with the Police and that investiation could not be completed early.

Sri KONDAJJI BASAPPA.—Audit was not completed.

Sri C. J. MUCKANNAPPA.—In what connection were the books seized? There was a complaint to the Police by some gentleman. On the recipt complaint, the Police went and seized the account books. What is the complaint made by the individual which prompted the police to immediately go and seize the books?

Sri KONDAJJI BASAPPA.—I want notice.

ಶ್ರೀ ಕೆ. ಲಕ್ಕಪ್ಪ.—Investigation ಆಗತಕ್ಕ ಕಾಲದಲ್ಲಿ ಪೋಲೀಸಿನವರು ಲೆಕ್ಕಪತ್ರಗಳನ್ನು ವಶಪಡಿಸಿಕೊಳ್ಳಲು ಹೋದಾಗ ಇಲಾಖೆಯ ಅಧಿಕಾರಿಗಳು ಅವರಿಗೆ ತೊಂದರೆ ಮಾಡಿದುದು ಗೊತ್ತಿದೆಯೆ?

ಶ್ರೀ ಕೊಂಡಜ್ಜಿ ಬಸಪ್ಪ.—ಇಲ್ಲ.

Sri M. R. PATIL.—On a point of order. Are we not entering into matters that are sub-judice by asking questions of this type?

Mr. SPEAKER.—These are supposed to be not relating to the facts covered by the case. That is what Hon'ble Members are telling me.

Sri M. R. PATIL.—It is for the Chair to decide whether these matters are sub-judice or not. I seek a clarification on this point.

Mr. SPEAKER.—To a very large extent my friend Sri M. R. Patil is correct, but I have already made an obeservation which covers the question that he has raised.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—Investigation ಬಹಳಕಾಲ ನಿಧಾನವಾದರೆ, ಸಂಬಂಧಪಟ್ಟ ಕಾಗದಪತ್ರ ಮತ್ತು ಲೆಕ್ಕದ ಪುಸ್ತಕಗಳನ್ನು ಗೆದ್ದಲು ತಿಂದಿವೆ ಎಂದು ಹೇಳುವುದಕ್ಕವಕಾಶವಾಗುವುದಿಲ್ಲವೆ!

Sri KONDAJJI BASAPPA.—That is a matter of opinion.

Construction of an irrigation tract road to the right side of Bhadra Reservoir

*Q.—157. Sri T. D. DEVENDRAPPA (Bhadravathi).—

Will the Government be pleased to state :—

(*a*) whether it is a fact that the road connecting Holehonnur, Siddapura, Sanyasikodammage, Nagasamudra, Mangote, Anaveri has been taken up for construction of an irrigation tract road to the right side of Bhadra Reservoir ;

(*b*) if so, the estimated cost of the above said road ;

(*c*) whether they are aware of the hardships caused to the people and cattle during rainy season for want of communication facilities in this area ;

(*d*) if so, whether they intend to take up this work immediately?

A.—Sri S. NIJALINGAPPA (Chief Minister).—

(*a*) The road from Holehonnur to Anaveri is an existing road taken up for improvement under the programme of Irrigation Tract roads under Bhadra Project.

(*b*) Rs. 2,39,350.

(*c*) No.

(*d*) The work has been taken up.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಭದ್ರಾ ಜಲಾಶಯದ ನೀರಾವರಿ ರಸ್ತೆಯ ಕಾರ್ಯಕ್ರಮದ ಮೇರೆಗೆ ಈಗಿರುವ ಹೊಳೆಹೊನ್ನೂರಿನಿಂದ ಅನವೇರಿಗೆ ಹೋಗುವ ರಸ್ತೆಯನ್ನು ಉತ್ತಮಗೊಳಿಸುವುದಕ್ಕಾಗಿ 2,39,350 ರೂಪಾಯಿಗಳ ವೆಚ್ಚದ ಅಂದಾಜು ತಯಾರಾಗಿದೆ ಮತ್ತು ಕೆಲಸವನ್ನು ಪ್ರಾರಂಭಿಸಲಾಗಿದೆ ಎಂದು ಉತ್ತರ ಬಂದಿದೆ. ಆದರೆ ಮೂರು ವರ್ಷಗಳಿಂದಲೂ ಈ ಕೆಲಸದ ಬಗ್ಗೆ ಹೀಗೆಯೇ ಉತ್ತರ ಬರುತ್ತಿರಲು ಕಾರಣವೇನು?

†ಶ್ರೀ ಎಸ್. ನಿಜಲಿಂಗಪ್ಪ.—ಮೊದಲು ಮಾತನಾಡಿ ಒಬ್ಬ ಕಂಟ್ರಾಕ್ಟರಿಗೆ ಈ ಕೆಲಸವನ್ನು ಕೊಡಲಾಗಿತ್ತು. ಆತ ಕೆಲಸವನ್ನು ಅರ್ಧಮಾಡಿ ಬಿಟ್ಟು ಹೋದುದರಿಂದ ಪುನಃ ಟೆಂಡರ್ ಕರೆದು ಬೇರೆಯವರಿಗೆ ಕೊಡಬೇಕಾಯಿತು, ಹಾಗೇ ಕೊಟ್ಟಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ ರಸ್ತೆಯಲ್ಲಿ ಮಳೆಗಾಲದಲ್ಲಿ ಅನೇಕ ಜಾನುವಾರುಗಳು ಹೂತು ನತ್ತು ಹೋಗಿವೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಬಂದಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ರೋಡ್ ರೋಲರ್ ಯಂತ್ರಗಳು, ಲಾರಿಗಳು ಇಲ್ಲದೆ ಇರುವುದರಿಂದ ಈ ರಸ್ತೆಯ ಕೆಲಸ ತಡವಾಗಿದೆ ಎನ್ನುವುದನ್ನು ಇಲಾಖೆಯ ಅಧಿಕಾರಿಗಳು ಸರ್ಕಾರದ ಗಮನಕ್ಕೆ ತಂದಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ತಂದಿಲ್ಲ ; ಈಗ ನೀವು ಹೇಳುತ್ತಿದ್ದೀರಿ, ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಹಿಂದೆ ಪಬ್ಲಿಕ್ ವರ್ಕ್ಸ್ ಮಂತ್ರಿಗಳಾಗಿದ್ದಾಗ ಈಗಲೂ ಮಂತ್ರಿಗಳಾಗಿರುವ ಶ್ರೀ ವೀರೇಂದ್ರ ಪಾಟೀಲ್ ಅವರು ರೋಡ್ ರೋಲರ್ ಯಂತ್ರಗಳನ್ನೂ, ಲಾರಿಗಳನ್ನೂ ಒಂದು ವಾರದಲ್ಲಿ ಕೊಡತಕ್ಕ ಏರ್ಪಾಡು ಮಾಡುತ್ತೇನೆಂದು ಅಪ್ಪಣೆ ಕೊಡಿಸಿದ್ದರು. ಅದಕ್ಕೇನು ಹೇಳುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಕೆಲಸ ಮಾಡಿಸುತ್ತೇವೆಂದು ಹೇಳುತ್ತೇನೆ.

Sri H. R. KESHAVA MURTHY.—Is he not a registered contractor ?

Sri S. NIJALINGAPPA.—I want notice.

Seizure of I. D. liquor in Basavapatna hobli and at Santhebennur.

*Q.—196. Sri KUNDUR RUDRAPPA (Channagiri).—

Will the Government be pleased to state :—

(*a*) whether it is a fact that the Home Minister in the previous Cabinet paid surprise visit with the special staff and seized 1500 gallons of I. D. liquor at Karignoor in Basavapatna Hobli and at Santhebennur ;

(*b*) the number of police officials and officers kept under suspension by him in connection with this case ;

(*c*) the action taken against those officers ?

*A.—Sri R. M. PATIL (Minister for Home).—

(*a*) No.

(*b*) None.

(*c*) Does not arise in view of reply to clause (*b*).

ಶ್ರೀ ಕುಂದೂರು ರುದ್ರಪ್ಪ.—ಸಾ ಮಾ ನ್ಯ ವಾ ಗಿ ಪ್ರ ತಿ ದಿ ವ ಸ ವೂ ಪತ್ರಿಕೆಗಳನ್ನೋದುತ್ತಿದ್ದೀರಾ ? (ನಗು !)

ಶ್ರೀ ಆರ್. ಎಂ. ಪಾಟೀಲ್.—ಇದಕ್ಕೆ ಉತ್ತರ ಕೊಡಬೇಕೆಂದರೆ ಕೊಡುತ್ತೇನೆ. ಅದಕ್ಕೇ ನಮಗೆ ಪಗಾರ ಕೊಟ್ಟು ಇಲ್ಲಿ ಕೂರಿಸಿದ್ದಾರೆ.

ಶ್ರೀ ಕುಂದೂರು ರುದ್ರಪ್ಪ.—ಹಿಂದಿನ ಗೃಹಸಚಿವರೂ ವಿಧಾನ ಸಭಾ ಸದಸ್ಯರಾದ ಶ್ರೀಮಾ ಬದರಿ ನಾರಾಯಣ್, ಗಾಂಜಿ ವೀರಪ್ಪ ಇವರುಗಳು ಆ ಗ್ರಾಮಕ್ಕೆ ದಯಮಾಡಿಸಿದ್ದಾಗ ಗೃಹ ಸಚಿವರು ಕಳ್ಳ ಭಟ್ಟಿ ಇಳಿಸುತ್ತಿದ್ದ ಕಡೆ ಹೋಗಿ ಕಾಲಿನಿಂದ ಒದೆದು ಒಂದೂವರೆ ಸಾವಿರ ಗ್ಯಾಲ್ ಸರಾಬು ಹಿಡಿದರೆಂದು ಪತ್ರಿಕೆಗಳಲ್ಲಿ ಬಂದಿದ್ದುದನ್ನು ಓದಿದ್ದೀರಾ ?

ಶ್ರೀ ಆರ್. ಎಂ. ಪಾಟೀಲ್.—ಸ್ವಾಮಿ, ವಿಷಯವನ್ನು ಅವರು ಸರಿಯಾಗಿ ತಿಳಿದುಕೊಂಡಿಲ್ಲವೆಂದು ಕಾಣುತ್ತದೆ.....

Mr. SPEAKER.—If his question relates only to what has appeared in the news paper, it does not form a proper basis for any question at all. If he has got anything positive by way of personal knowledge, then he can put it.

Sri C. J. MUCKANNAPPA.—May I bring to the notice of the Speaker that there is a ruling by the previous Speaker to the effect that if a Member believes that the matter which has appeared in a paper is ture, then he can put the question and elicit information.

Mr. SPEAKER.—Perhaps the Hon'ble Member was a bit inattentive. What I said was that on the basis of what is written in the news paper alone he cannot put a question. If he has got anything positive, then only he can put the question because for any statement that he makes he must take the responsibility because I cannot hold the news paper responsible for it.

ಶ್ರೀ ಕುಂದೂರು ರುದ್ರಪ್ಪ.—ಆ ಸಂದರ್ಭದಲ್ಲಿ ಗೃಹ ಸಚಿವರು ಪ್ರಯಾಣ ಭತ್ಯ ಮತ್ತು ದಿನ ಭತ್ಯ ಗಳನ್ನು ತೆಗೆದುಕೊಂಡಿಲ್ಲವೆ ?

ಶ್ರೀ ಆರ್. ಎಂ. ಪಾಟೀಲ್.—ಈ ವಿಷಯವನ್ನು ಮಾನ್ಯ ಸದಸ್ಯರು ಬಹಳ ಅಡ್ಡಾಗಿ ಕೇಳುತ್ತಿದ್ದಾರೆ, ಉತ್ತರ ಹೇಳುತ್ತೇನೆ. ಆ ಭಾಗದಲ್ಲಿ Illicit distillation ಆಗುತ್ತಿತ್ತೆಂದು ಗೊತ್ತಾಗಿ ಆಗಿದ್ದ Intelligence cell ನವರು ಹೋಗಿ raid ಮಾಡಿ ಅಲ್ಲಿದ್ದ ಸಾಮಾನುಗಳನ್ನು ವಶಮಾಡಿಕೊಂಡಿದ್ದರು. ಅನಂತರ ಐ.ಜಿ.ಪಿ., ಮಂತ್ರಿಗಳು ಮತ್ತು ಅಧಿಕಾರಿಗಳು ಹೋಗಿ ಅಲ್ಲಿ ಅವರು ಏನು ಮಾಡಿದ್ದರೋ ಅದನ್ನು ನೋಡಿದರು.

ಶ್ರೀ ಕುಂದೂರು ರುದ್ರಪ್ಪ.—ಸಂಬಂಧಪಟ್ಟ ಪೋಲೀಸ್ ಇಲಾಖೆಯ ಸರ್ಕಲ್ ಇನ್‌ಸ್ಪೆಕ್ಟರು, ಸಬ್ ಇನ್‌ಸ್ಪೆಕ್ಟರು, ದಫೇದಾರರು ಇವರು ಸಸ್ಪೆಂಡ್ ಆಗಿದ್ದಾರೆಯೇ ?

ಶ್ರೀ ಆರ್. ಎಂ. ಪಾಟೀಲ್.—ಅಲ್ಲಿ ಸರ್ಕಲ್ ಇನ್‌ಸ್ಪೆಕ್ಟರು, ಪೋಲೀಸ್ ಸಬ್ ಇನ್‌ಸ್ಪೆಕ್ಟರು ಸಸ್ಪೆಂಡ್ ಆದದ್ದು ನಿಜ, ಆದರೆ ಈ ಕೇಸಿನ ಸಂಬಂಧದಲ್ಲಲ್ಲ. ಸಾಮಾನ್ಯವಾಗಿ ತಮ್ಮ ಕರ್ತವ್ಯಕ್ಕೆ ಚ್ಯುತಿ ತಂದಿದ್ದಾರೆ, ಆಸ್ಥೆ ವಹಿಸಿ ಕೆಲಸ ಮಾಡುವುದಿಲ್ಲವೆಂಬ ಬಗ್ಗೆ ವಿಚಾರ ಮಾಡಿ ಇಲಾಖೆಯವರು ಅವರನ್ನು ಸಸ್ಪೆಂಡ್ ಮಾಡಿದ್ದಾರೆ.

Sri G. VENKATAI GOWDA.—It was said that the I.G.P. went there and found some illicit liquor. May we